ತಿಮ್ಮನಕಟ್ಟೆ ರಸ್ತೆ ಮುಖ್ಯ ರಸ್ತೆಯನ್ನಾಗಿ ಪರಿವರ್ತನೆ

1114 (1752) ಕೆ.ಬಿ. ಕೋಳಿವಾಡ (ರಾಣೆಬೆನ್ನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ಮತ್ತು ಶಿವಮೊಗ್ಗ ಮಾರ್ಗದ ತಿಮ್ಮನಕಟ್ಟೆ ರಸ್ತೆಯನ್ನು ರಾಜ್ಯ ಮುಖ್ಯ ರಸ್ತೆಯನ್ನಾಗಿ ಪರಿವರ್ತಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಜಿ.ಹೆಚ್. ಅಶ್ವತ್ ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ರಾಣೆಬೆನ್ನೂರು ಮತ್ತು ಶಿವಮೊಗ್ಗ (ತಿಮ್ಮನ ಕಟ್ಟೆ ಮಾರ್ಗ) ರಸ್ತೆಯು ಮುಖ್ಯ ಜಿಲ್ಲಾ ರಸ್ತೆಯಾಗಿದೆ. ಇದನ್ನು ರಾಜ್ಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೆ ಏರಿಸುವ ಪ್ರಸ್ತಾಪವು ಸರ್ಕಾರದ ಪರಿಶೀಲನೆಯಲ್ಲಿದೆ.

Transfer of Zilla Parishat Minor Irrigation taks to M.I. department.

1116 (1949) SRI MANOHAR AINAPUR (Ballolli) : Will the Minister of state for Minor Irrigation be pleased to state?

a) Whether it is a fact that Minor Irrigation tanks of Zilla Parishad will be transferred to Minor Irrigation Department;

b) If so, when;

SRI K.S. MALLIKARJUNA PRASANNA (Minister of State for Minor Irrigation) :

a) This matter is under consideration of the Government.

b) This matter is under consideration of the Government.

ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ರಸ್ತೆ ಮತ್ತು ಸೇತುವೆಗಳಿಗೆ ನಿಗದಿಪಡಿಸಿರುವ ಅನುದಾನ

1117 (1950) ಶ್ರೀ ಮನೋಹರ್ ಐನಾಪುರ್ (ಬಳ್ಳೊಳ್ಳಿ) : ಮಾನ್ಯ ಲೋಕೋಪಯೋಗಿ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನ ಸಭಾ ಮತ ಕ್ಷೇತ್ರಕ್ಕೆ ರಸ್ತೆ ಮತ್ತು ಸೇತುವೆಗಳಿಗೆ ನಿಗದಿಪಡಿಸಿರುವ ಅನುದಾನವೆಷು;

ಆ) ಡಾಂಬರೀಕರಣಕ್ಕೆ ವೆಚ್ಚ ಮಾಡಿರುವುದು ಎಷ್ಟು?

ಇ) ಈ ಸಾಲಿನಲ್ಲಿ ಹೆಚ್ಚುವರಿ ಅನುದಾನ ನೀಡುವ ಪ್ರಸ್ತಾಪವೇನಾದರು ಇದೆಯೆ?

ಶ್ರೀ ಜಿ.ಹೆಚ್. ಅಶ್ವಥರೆಡ್ಡಿ (ಲೋಕೋಪಯೋಗಿ ಮಂತ್ರಿಯವರು) :

ಅ) ಲೋಕೋಪಯೋಗಿ ಕಾಮಗಾರಿಗಳಿಗೆ ತಾಲ್ಲೂಕುವಾರು ಅನುದಾನವನ್ನು ನಿಗದಿಪಡಿಸುವುದಿಲ್ಲ. ಇಂಡಿ ತಾಲ್ಲೂಕಿನ ಬಳ್ಳೊಳ್ಳಿ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 1991-92ನೇ ಸಾಲಿನಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳಿಗೆ 27.26 ಲಕ್ಷ ರೂ.ಗಳ ಅನುದಾನವನ್ನು ನಿಗದಿಪಡಿಸಿದೆ.

ಅ) ಡಾಂಬರೀಕರಣಕ್ಕೆ 1991-92ನೇ ಸಾಲಿನಲ್ಲಿ 1.80 ಲಕ್ಷ ರೂ.ಗಳನ್ನು ವೆಚ್ಚ ಮಾಡಿದೆ.

ಇ) ಪ್ರತಿ ವಿಧಾನ ಸಭಾ ಮತ ಕ್ಷೇತ್ರದಲ್ಲಿ ತೆಗೆದುಕೊಂಡಿರುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸೆಪ್ಲಿಮಂಟರಿ ಅನುದಾನದ ಲಭ್ಯತೆಯನ್ನು ಅನುಸರಿಸಿ ಹೆಚ್ಚುವರಿ ಅನುದಾನ ನೀಡುವ ಉದ್ದೇಶವಿದೆ.

ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಓವರ್ ಬ್ರಿಡ್ಜ್ ನಿರ್ಮಾಣ

1118 (1805) ಶ್ರೀ ಪಿ. ಬಸವರಾಜ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರ ಸಹಭಾಗಿತ್ವ ನೀಡುತ್ತದೆಯೆ;

ಆ) ನೀಡುತ್ತಿದ್ದಲ್ಲಿ, ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಬ್ರಹ್ಮಾವರ-ಹೆಬ್ರಿ ರಾಜ್ಯ ರಸ್ತೆಯ ಬಾಂತಾರು ಸ್ಥಳದಲ್ಲಿ ರೈಲ್ವೆಯವರು ನಿರ್ಮಿಸಲು ಉದ್ದೇಶಿಸಿರುವ 'ಲೆವೆಲ್‌ಕ್ರಾಸಿಂಗ್'ಗೆ ಬದಲಾಗಿ "ಓವರ್ ಬ್ರಿಡ್ಜ್" ನಿರ್ಮಾಣವಾಗುವಂತೆ ಸರ್ಕಾರ ಕ್ರಮ ಕೈಗೊಳ್ಳುವುದೆ;

ಇ) ಇಲ್ಲದಿದ್ದಲ್ಲಿ ರಾಜ್ಯ ಸರ್ಕಾರವು ಈ ಸ್ಥಳದಲ್ಲಿ ಲೆವೆಲ್ ಕ್ರಾಸಿಂಗ್ ಬದಲು ಓವರ್ ಬ್ರಿಡ್ಜ್‌ನ್ನು ನಿರ್ಮಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದೆ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಮಂತ್ರಿಗಳು) :

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೊಂಕಣ ರೈಲ್ವೆ ಕಾಮಗಾರಿಯು ರಾಜ್ಯ ಹೆದ್ದಾರಿಗಳನ್ನು ಸಂಧಿಸುವಲ್ಲಿ ಮೇಲು ಸೇತುವೆಯನ್ನು ನಿರ್ಮಿಸಲು ರಾಜ್ಯ ಸರ್ಕಾರವು ನೇರವಾಗಿ ಸಹಭಾಗಿತ್ವವನ್ನು ನೀಡುವುದಿಲ್ಲ. ಇದು ಹೊಸ ರೈಲು ಮಾರ್ಗವಾದ್ದರಿಂದ ಎಲ್ಲಾ ಕಾಮಗಾರಿಯನ್ನು ಕೊಂಕಣ ರೈಲ್ವೆ ಯೋಜನೆಯ ಅಂದಾಜು ಪಟ್ಟಿಯಲ್ಲಿ ಭರಿಸಬೇಕಾಗುತ್ತದೆ.

ಆ) ಬ್ರಹ್ಮಾವರ ಹೆಬ್ರಿ ಮುಖ್ಯ ಜಿಲ್ಲಾ ರಸ್ತೆಯ (ರಾಜ್ಯ ಹೆದ್ದಾರಿಯಲ್ಲಿ) 78.851 ಕಿ.ಮೀ. ರೈಲು ಮಾರ್ಗದ ರಸ್ತೆ ದಾಟಿನಲ್ಲಿ 'ಬಿ' ಕ್ಲಾಸ್ ಲೆವೆಲ್ ಕ್ರಾಸಿಂಗ್ ನಿರ್ಮಿಸಲು ಉದ್ದೇಶಿಸಲಾಗಿದೆ. ಈಗಿನ ವಾಹನ ಸಂಚಾರಗಳ ಪ್ರಮಾಣಕ್ಕೆ ಉದ್ದೇಶಿಸಿರುವ ಲೆವೆಲ್ ಕ್ರಾಸಿಂಗ್ ಸರಿಯಾಗಿರುತ್ತದೆ.

ಇ) ಉದ್ಭವಿಸುವುದಿಲ್ಲ.